aglasem.com

FOR KARNATAKA CLASS 10 PREPARATION

Karnataka SSLC Model Question Paper 2027 for Social Science (Paper 2, Kannada Medium)

EXAM	YEAR	TYPE	SUBJECT
Karnataka Class 10	2027	Sample Paper	Social Science

85-K

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD

6th Cross, Malleshwaram, Bengaluru – 560 003

2026–27 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 2

S.S.L.C. MODEL QUESTION PAPER - 2 : 2026-27

ವಿಷಯ : ಸಮಾಜವಿಜ್ಞಾನ

Subject : SOCIAL SCIENCE

ವಿಷಯ ಸಂಕೇತ : **85-K** | **Subject Code : 85-K**

ಸಮಯ : 3 ಗಂಟೆ 15 ನಿಮಿಷಗಳು] | [Time : 3 Hours 15 Minutes

ಗರಿಷ್ಠ ಅಂಕಗಳು : 80] | [Max. Marks : 80

ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ / ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದು ಮಾತ್ರ ಸರಿಯಾಗಿದೆ ಅಥವಾ ಹೆಚ್ಚು ಸೂಕ್ತವಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಪೂರ್ಣ ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ: 8 X 1 = 8

1. ಮೈಸೂರಿನ ನವರಾತ್ರಿ ಉತ್ಸವವನ್ನು ಶ್ರೀರಂಗಪಟ್ಟಣದಲ್ಲಿ ಪ್ರಾರಂಭಿಸಿದವರು.
   {A} ಜಯಚಾಮರಾಜೇಂದ್ರ ಒಡೆಯರ್
   (B) ನಾಲ್ವಡಿ ಕೃಷ್ಣರಾಜ ಒಡೆಯರ್
   (C) ರಾಜ ಒಡೆಯರ್
   (D) ಹತ್ತನೇ ಚಾಮರಾಜೇಂದ್ರ ಒಡೆಯರ್
2. ಶೀತಲ ಸಮರದ ಸಂದರ್ಭದಲ್ಲಿ ಭಾರತವು ಯಾವುದೇ ಶಕ್ತಿ ಬಣವನ್ನು ಸೇರದಿರಲು ನಿರ್ಧರಿಸಿತು. ಈ ನೀತಿಯು ಹೀಗೆ ಕರೆಯಲಾಗುವುದು
   {A} ಸಾಮ್ರಾಜ್ಯಶಾಹಿ ನೀತಿ
   (B) ನೀಲಿ ನೀರಿನ ನೀತಿ
   (C) ವರ್ಣಬೇಧ ನೀತಿ
   (D) ಅಲಿಪ್ತ ನೀತಿ
3. ವಿಶ್ವ ಆರೋಗ್ಯ ಸಂಸ್ಥೆಯ ಕೇಂದ್ರ ಕಛೇರಿ ಇರುವ ಸ್ಥಳ
   {A} ಪ್ಯಾರೀಸ್
   (B) ನ್ಯೂಯಾರ್ಕ
   (C) ಜಿನೇವಾ
   (D) ವಾಷಿಂಗ್‌ಟನ್
4. ಕೈಗಾ ಅಣು ವಿದ್ಯುತ್ ಸ್ಥಾವರದ ಯೋಜನೆಯ ವಿರುದ್ಧ ಚಳವಳಿ ಪ್ರಾರಂಭವಾಯಿತು, ಏಕೆಂದರೆ
   {A} ಸಾಗರ ಜೀವಿಗಳನ್ನು ಸಂರಕ್ಷಣೆ ಮಾಡಲು
   (B) ಜಲಾಶಯ ನಿರ್ಮಾಣವನ್ನು ನಿಲ್ಲಿಸಲು
   (C) ಸುತ್ತಲಿನ ನಿತ್ಯಹರಿದ್ವರ್ಣ ಕಾಡುಗಳನ್ನು ಸಂರಕ್ಷಿಸಲು
   (D) ಉಷ್ಣ ವಿದ್ಯುತ್ ಸ್ಥಾವರ ನಿರ್ಮಾಣವನ್ನು ತಡೆಯಲು
5. ವಿಶೃತನು ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿಯಾಗಿದ್ದು ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯಲು ಆತನಿಗೆ ಸೂಕ್ತವಾದ ಬ್ಯಾಂಕ್‌ಖಾತೆಯ ವಿಧ ಯಾವುದೆಂದರೆ,
   {A} ಉಳಿತಾಯ ಖಾತೆ
   (B) ಚಾಲ್ತಿ ಖಾತೆ
   (C) ಆವರ್ತ ಠೇವಣಿ ಖಾತೆ
   (D) ನಿಶ್ಚಿತ ಠೇವಣಿ ಖಾತೆ
6. ಪಶ್ಚಿಮಘಟ್ಟಗಳ ಪೂರ್ವ ಭಾಗವು ಪಶ್ಚಿಮ ಭಾಗಗಳಿಗಿಂತ ಕಡಿಮೆ ಮಳೆ ಪಡೆಯುವುದು ಏಕೆಂದರೆ
   {A} ಇದು ಮರುಭೂಮಿಯಾಗಿರುವುದರಿಂದ
   (B) ಇದು ಮಳೆ ನೆರಳಿನ ಪ್ರದೇಶವಾಗಿರುವುದರಿಂದ
   (C) ಇಲ್ಲಿ ಹೆಚ್ಚಿನ ಹಿಮಪಾತವಾಗುವುದರಿಂದ
   (D) ಮಾರುತಗಳು ಬೀಸುವ ದಿಕ್ಕಿಗೆ ಅಭಿಮುಖವಾಗಿರುವುದರಿಂದ
7. ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸಲು ಮತ್ತು ಸ್ವಾವಲಂಬಿಗಳನ್ನಾಗಿಸುವ ಜಾರಿಗೆ ತಂದ ಕಾರ್ಯಕ್ರಮ
   .{A} ಸಂಧ್ಯಾ ಸುರಕ್ಷಾ ಯೋಜನೆ
   (B) ಯುವನಿಧಿ
   (C) ಮಹಿಳಾ ಸ್ವ ಸಹಾಯ ಸಂಘಗಳು
   (D) ಮಹಿಳಾ ಅಭ್ಯುದಯ ಯೋಜನೆ
8. ಚೇತನಳು ಬೆಂಗಳೂರಿನಿಂದ ಲಂಡನ್ ನಗರಕ್ಕೆ ಶೈಕ್ಷಣಿಕ ಪ್ರವಾಸ ಯೋಜನೆಯೊಂದನ್ನು ಹೊಂದಿದ್ದು ಆಕೆಯು ಅತ್ಯಂತ ವೇಗವಾಗಿ ಲಂಡನನ್ನು ತಲುಪಲು ಸೂಕ್ತವಾದ ಸಾರಿಗೆಯ ವಿಧಯಾವುದೆಂದರೆ

{A} ಜಲ ಸಾರಿಗೆ
(B) ರೈಲು ಸಾರಿಗೆ
(C) ವಾಯು ಸಾರಿಗೆ
(D) ರಸ್ತೆ ಸಾರಿಗೆ

II ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ: **8 X 1 = 8**

9. ಬ್ರಿಟಿಷ್ ಸರ್ಕಾರವು ಪೀಲ್ ಆಯೋಗವನ್ನು ಏಕೆ ಸ್ಥಾಪಿಸಿತು?

10. ಎರಡನೇ ಮಹಾಯುದ್ಧವು ಶೀತಲ ಸಮರಕ್ಕೆ ಹೇಗೆ ನಾಂದಿಯಾಯಿತು?

11. ವಿಶ್ವಸಂಸ್ಥೆಯ ಭದ್ರತಾ ಸಮಿತಿಯನ್ನು ವಿಶ್ವಸಂಸ್ಥೆಯ ಸಚಿವ ಸಂಪುಟ ಎಂದು ಏಕೆ ಕರೆಯಲಾಗುತ್ತದೆ?

12. ಸಾಮಾಜಿಕ ಸ್ಥರವಿನ್ಯಾಸ ಎಂದರೇನು?

13. ನರ್ಮದಾ ಬಚಾವೋ ಆಂದೋಲನ ಯಾವ ರಾಜ್ಯದಲ್ಲಿ ಪ್ರಾರಂಭವಾಯಿತು?

14. ಇಸ್ರೋದ ಪ್ರಥಮ ಅಧ್ಯಕ್ಷರು ಯಾರು?

15. ಕೇಂದ್ರದ ಯೋಜನಾ ವೆಚ್ಚಗಳಡಿಯಲ್ಲಿನ ಸಾಮಾಜಿಕ ಸೇವೆಗಳಿಗೆ ಎರಡು ಉದಾಹರಣೆ ನೀಡಿರಿ.

16. ಜಿಲ್ಲಾ ಕೈಗಾರಿಕಾ ಕೇಂದ್ರಗಳ ಸ್ಥಾಪನೆಯ ಮುಖ್ಯ ಉದ್ದೇಶವನ್ನು ತಿಳಿಸಿ.

III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ: **8 X 2 = 16**

17. ನಾಗರೀಕ ಸೇವಾ ಪರೀಕ್ಷೆಗಳ ಮೂರು ಹಂತಗಳು ಯಾವುವು?

ಅಥವಾ

ವಿಶ್ವಸಂಸ್ಥೆಯ ಪ್ರಧಾನ ಅಂಗಸಂಸ್ಥೆಗಳು ಯಾವುವು?

18. ಹೆಣ್ಣು ಭ್ರೂಣಹತ್ಯೆಗೆ ಕಾರಣಗಳನ್ನು ವಿವರಿಸಿ.

ಅಥವಾ

ಅಸ್ಪೃಶ್ಯತೆಯ ನಿವಾರಣೆಗೆ ತೆಗೆದುಕೊಳ್ಳಬಹುದಾದ ಕ್ರಮಗಳನ್ನು ವಿವರಿಸಿ.

19. ಸುಗ್ಗಿ ಪೂರ್ವ ತಂತ್ರಜ್ಞಾನವು ಸುಗ್ಗಿ ನಂತರದ ತಂತ್ರಜ್ಞಾನಗಳ ನಡುವಿನ ಭಿನ್ನತೆಗಳನ್ನು ತಿಳಿಸಿ.

20. ಭಾರತದ ಗ್ರಾಹಕ ಸಂರಕ್ಷಣಾ ಕಾಯಿದೆಯು ಗ್ರಾಹಕರಿಗೆ ನೀಡಿದ ಯಾವುದಾದರೂ ನಾಲ್ಕು ಹಕ್ಕುಗಳನ್ನು ತಿಳಿಸಿ.

21. ಸಹಾಯಕ ಸೈನ್ಯ ಪದ್ಧತಿಯು ದೇಶಿಯ ಆಡಳಿತಗಾರರನ್ನು ದುರ್ಬಲಗೊಳಿಸಿತು. ಹೇಗೆ?

22. ತುಂಗಭದ್ರ ನದಿಕಣಿವೆ ಯೋಜನೆಯ ಉದ್ದೇಶಗಳನ್ನು ವಿವರಿಸಿ.

23. ಖಾರೀಫ್ ಮತು ರಬಿ ಬೆಳೆ ಋತುಗಳ ನಡುವಿನ ವ್ಯತ್ಯಾಸಗಳೇನು?

24. ಭಾರತದ ಒಕ್ಕೂಟದಲ್ಲಿ ಜಮ್ಮು ಕಾಶ್ಮೀರದ ವಿಲೀನವು ಇತರ ಸಂಸ್ಥಾನಗಳ ವೀಲಿನಕ್ಕಿಂತ ವಿಶಿಷ್ಟವಾದುದು. ಸಮರ್ಥಿಸಿ,

IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಆರು ವಾಕ್ಯಗಳಲ್ಲಿ ಅಥವಾ ಅಂಶಗಳ್ಳಿ ಉತ್ತರಿಸಿ: **9 X 3 = 27**

25. ಬಂಗಾಳದ ಮೇಲೆ ನಿಯಂತ್ರಣ ಹೊಂದಲು ಬಕ್ಸಾರ್ ಕದನವು ಬ್ರಿಟಿಷರಿಗೆ ನೆರವಾಯಿತು. ಸಮರ್ಥಿಸಿ.

ಅಥವಾ

1935 ರ ಭಾರತ ಸರ್ಕಾರದ ಶಾಸನವು ಭಾರತ ಸಂವಿಧಾನದ ರಚನೆಗೆ ತಳಹದಿಯಾಗಿತ್ತು.ಸಮರ್ಥಿಸಿ.

26. ಅರಣ್ಯಗಳು ನಮಗೆ ಮತ್ತು ಪರಿಸರಕ್ಕೆ ತುಂಬಾ ಉಪಯೋಗಕಾರಿಯಾಗಿವೆ. ವಿಶ್ಲೇಷಿಸಿ.

ಅಥವಾ

ಸಂಪರ್ಕದ ಉಪಯೋಗಗಳನ್ನು ವಿಶ್ಲೇಷಿಸಿ..

27. ಅಧಿಕಾರ ವಿಕೇಂದ್ರಿಕರಣವು ಗಾಂಧಿಜೀಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ಎತ್ತಿ ಹಿಡಿಯುತ್ತದೆ. ದೃಡೀಕರಿಸಿ.

ಅಥವಾ

ಕೇಂದ್ರ ಸರ್ಕಾರದವು ತೆರಿಗೆಗಳ ಜೊತೆಗೆ ತೆರಿಗೆಯೇತರ ಮೂಲಗಳಿಂದಲೂ ಆದಾಯ ಸಂಗ್ರಹಿಸುವುದು. ದೃಡೀಕರಿಸಿ.

28. ಅಂಚೆ ಕಛೇರಿಗಳು ಒದಗಿಸುವ ಹಣಕಾಸಿನ ಸೇವೆಗಳು ಯಾವುವು?

ಅಥವಾ

ಉದ್ಯಮಶೀಲತೆಯ ಗುಣಲಕ್ಷಣಗಳಾವುವು?

29. ಭಾರತೀಯ ಸಮಾಜವನ್ನು ಸುಧಾರಿಸುವಲ್ಲಿ ಸತ್ಯ ಶೋಧಕ ಸಮಾಜದ ಪಾತ್ರವು ಅವಿಸ್ಮರಣೀಯವಾದುದು. ಸಮರ್ಥಿಸಿ.

30. ಭಾರತದ ಪ್ರಥಮ ಸ್ವಾತಂತ್ರ ಸಂಗ್ರಾಮಕ್ಕೆ ಕಾರಣವಾದ ಆರ್ಥಿಕ ಹಾಗೂ ಮಿಲಿಟರಿ ಕಾರಣಗಳನ್ನು ವಿವರಿಸಿ.

31. ಭಾರತದ ವಿದೇಶಾಂಗ ನೀತಿಯ ಮೂಲಭೂತ ತತ್ವಗಳನ್ನು ವಿವರಿಸಿ

32. ಸಂಘಟಿತ ವಲಯದ ಕೆಲಸಗಾರರು ಅಸಂಘಟಿತ ವಲಯದ ಕೆಲಸಗಾರರಿಗಿಂತ ಹೇಗೆ ಭಿನ್ನವಾಗಿದ್ದಾರೆ?

33. ಚಂಡಮಾರುತಗಳಿಂದ ಉಂಟಾಗುವ ಪರಿಣಾಮಗಳಾವುವು?

V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ: **4 X 4 = 16**

34. ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯು ಮೈಸೂರನ್ನು ಮಾದರಿ ರಾಜ್ಯವನ್ನಾಗಿ ಮಾಡಿತು. ಸಮರ್ಥಿಸಿ.

ಅಥವಾ

ಇ. ವಿ. ರಾಮಸ್ವಾಮಿ ನಾಯ್ಕರ್‌ರವರು ಸಮಾನತೆಯನ್ನು ಎತ್ತಿಹಿಡಿದ ಸಮಾಜ ಸುಧಾರಕರು. ಸಮರ್ಥಿಸಿ.

35. ಡೆಕ್ಕನ್ ಟ್ರಾಪ್ ವಲಯದಲ್ಲಿ ಪ್ರಧಾನವಾಗಿ ಕಂಡುಬರುವ ಮಣ್ಣಿನ ಗುಣಲಕ್ಷಣಗಳಾವುವು?

ಅಥವಾ

ಭಾರತದಲ್ಲಿ ಸಕ್ಕರೆ ಕೈಗಾರಿಕೆಗಳ ಸ್ಥಾನಿಕರಣವು ಅನೇಕ ಅಂಶಗಳಿಂದ ಪ್ರಭಾವಿಸಲ್ಪಟಿದೆ. ಸಮರ್ಥಿಸಿ.

36. ಭಾರತದ ಪ್ರಧಾನಮಂತ್ರಿಯಾಗಿ ನೆಹರೂರವರ ಕೊಡುಗೆಗಳನ್ನು ವಿವರಿಸಿ,

37. ಜನಸಂಖ್ಯಾ ಸ್ಫೋಟದಿಂದ ಉಂಟಾಗುವ ಪರಿಣಾಮಗಳನ್ನು ವಿವರಿಸಿ.

VI. 38. ನಿಮಗೆ ನೀಡಲಾಗಿರುವ ಭಾರತದ ನಕ್ಷೆಯಲ್ಲಿ ಈ ಕೆಳಗಿನ ಯಾವುದಾದರೂ ಐದು ಸ್ಥಳಗಳನ್ನು ಗುರುತಿಸಿ: **5 X 1 = 5**

a) $82^0 30^1$ ಪೂರ್ವ ರೇಖಾಂಶ

b) ಕೊಂಕಣ ತೀರ

c) ತಾರಪುರ

d) ನವ ಮಂಗಳೂರು ಬಂದರು

e) ನರೋರ

f) ಭಾಕ್ರ–ನಂಗಲ್

g) ಮಹರ್ಷಿ ವಾಲ್ಮೀಕಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

h) ಭಾರತದ ಸಿಲಿಕಾನ್ ಕಣಿವೆ

i) ಗಂಗಾನಗರ

j) ಇಂದಿರಾ ಪಾಯಿಂಟ್

ದೃಷ್ಟಿವಿಕಲ ಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ (ಪ್ರಶ್ನೆ ಸಂಖ್ಯೆ 38 ಕ್ಕೆ ಬದಲಾಗಿ) **5**

ವಿವಿದ್ಧೋದೇಶ ನದಿ ಕಣಿವೆ ಯೋಜನೆಗಳ ಮುಖ್ಯ ಉದ್ದೇಶಗಳಾವುವು?

ಅಥವಾ

ಹಿಮಾಲಯ ಪರ್ವತ ಪ್ರದೇಶಗಳ ಪ್ರಾಮುಖ್ಯತೆಯನ್ನು ತಿಳಿಸಿ.